**ಸಾಕ್ಷಿಯನ್ನು ದಿಃ 05.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಆರ್ ವಕೀಲರಿಂದಃ-**

ನನ್ನ ಗಂಡನ ಊರು ಚುಂಚನಕಟ್ಟೆ ಹೋಬಳಿ, ಹೊಸೂರು. ನನ್ನ ಗಂಡನ ಜೊತೆ ಹುಟ್ಟಿದವರು ಗಂಡನ ಸೇರಿ 4 ಜನ. ಅವರುಗಳೆಂದರೆ ಸಾಮೆಗೌಡರು, ರಾಮಕೃಷ್ಣೆಗೌಡ, ರಮೇಶ್, ಶ್ರೀನಿವಾಸ್ ಎಲ್ಲರೂ ಹೊಸೂರು ಗ್ರಾಮದಲ್ಲೆ ವಾಸ ಇದ್ದಾರೆ. ಅದರಲ್ಲಿ ಒಬ್ಬರು ಕೆ. ಆರ್ ನಗರದಲ್ಲಿ ವಾಸ ಇದ್ದಾರೆ. 2 ನೇ ಪ್ರತಿವಾದಿ ವೀಣಾ ನನ್ನ ಅತ್ತಿಗೆ. ನನ್ನ ಗಂಡ ರಮೇಶ್ 2 ನೇ ಪ್ರತಿವಾದಿಯ ಚಿಕ್ಕಪ್ಪ ಎಂದರೆ ಸರಿ. 2 ನೇ ಪ್ರತಿವಾದಿ ವೀಣಾ ರವರ ತಂದೆ ಹೆಸರು ಸ್ವಾಮಿಗೌಡ. 2 ನೇ ಪ್ರತಿವಾದಿಯನ್ನು ಮದುವೆ ಆಗುವ ಸಮಯದಲ್ಲಿ ನನ್ನ ಗಂಡನ ಸಹೋದರರರು ಪ್ರತ್ಯೇಕವಾಗಿ ಇದ್ದರು. ಹಾಗೆ ಪ್ರತ್ಯೇಕವಾಗಿದ್ದರೂ ಎಲ್ಲರೂ ಅನ್ಯೋನ್ಯವಾಗಿ ಇದ್ದರು ಎಂದರೆ ಸರಿಯಲ್ಲ. ವಿಜಯ್ ಕುಮಾರ್ ರವರು ಮದುವೆಗೂ ಮುಂಚೆನಿಂದಲೂ ಮಧ್ಯಪಾನ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನ್ನ ಮದುವೆ ಆದ ನಂತರ ನನ್ನ ತವರು ಮನೆಗೆ ಹೋಗಿ ಬಂದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ವೀಣಾನಿಗೆ ನನ್ನ ಅಣ್ಣ ವಿಜಯ್ ಕುಮಾರ್ ಗೆ ಮದುವೆ ಮಾಡುವ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಮುಂದೆ ನಿಂತು ಆತನ ಕುಡಿಯುತ್ತಾನೆಂದು ಅದರಿಂದ ಹೊರ ಬರಿಸಬೇಕೆಂಬ ಉದ್ದೇಶದಿಂದ ಮದುವೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡನಿಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನಾವು 2 ನೇ ಪ್ರತಿವಾದಿ ತಂದೆ ಸ್ವಾಮಿಗೌಡನನ್ನು ಪುಸಲಾಯಿಸಿ ನನ್ನ ಅಣ್ಣನಿಗೆ ಮದುವೆ ಮಾಡಿಸಿದ್ದೇವು ಎಂದರೆ ಸರಿಯಲ್ಲ. ಹಾಗೆ ಮದುವೆ ಮಾಡಿದ ನಂತರ ನನ್ನ ಅಣ್ಣ 2 ನೇ ಪ್ರತಿವಾದಿಗೆ ಹೊಡಿ ಬಡಿ ಮಾಡಿ ಮನೆಯಿಂದ ಹೊರಗೆ ಹಾಕಿದ್ದ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಾಯಿ ನನ್ನ ಜೊತೆಯೆ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಜೊತೆಯಲ್ಲೆ ಹೊಸೂರು ಗ್ರಾಮದಲ್ಲೆ ಇದ್ದಾರೆ ಎಂದರೆ ಅವರು ಬೇರೆ ಇದ್ದಾರೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಾಯಿ, ನನ್ನ ಅಕ್ಕನ ಮಕ್ಕಳು,(1, 4 ರಿಂದ 9 ನೇ ಪ್ರತಿವಾದಿಗಳು) ಎಲ್ಲರೂ ಶಾಮಿಲಾಗಿ 2 ನೇ ಪ್ರತಿವಾದಿ ಹೆಸರಿನಲ್ಲಿ ಇರುವ

ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. 1, 4 ರಿಂದ 9 ನೇ ಪ್ರತಿವಾದಿಗಳು ನನ್ನ ಮಾತನ್ನು ಕೇಳಿಕೊಂಡು 2 ಮತ್ತು 3 ನೇ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುವ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ.

ನನ್ನ ತಾತ ಮೂಗೇಗೌಡ ಎಂಬ ಹೆಸರಲ್ಲದೇ ಬೇರೆ ಹೆಸರಿನಿಂದ ಕರೆಯುತ್ತಿರಲಿಲ್ಲ. ಹುಣಸೂರು ತಾಲ್ಲೂಕು, ಹನಗೋಡು ಹೋಬಳಿ, ವಾರಂಚಿ ಗ್ರಾಮದ ಸರ್ವೆ ನಂ. 25 ಹಿಸ್ಸಾ 39-40-41 ಬಿ ರಲ್ಲಿ ನ ಹೆಸರಿಸಿರುವ ಕರೀಗೌಡ ಬಿನ್ ಕರೀಗೌಡ ಯಾರು ಎಂದರೆ ಅವರು ಯಾರೆಂದು ನನಗೆ ಗೊತ್ತಿಲ್ಲ, ನಮ್ಮ ಕುಟುಂಬಕ್ಕೆ ಸಂಬಂಧಿಸಿದವರು ಅಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ವಾರಂಚಿ ಗ್ರಾಮದಲ್ಲಿ 4 ಎಕರೆ , 38 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ಜೀವಿತಾವಧಿಯಲ್ಲಿ 4 ಎಕರೆ, 38 ಗುಂಟೆ ಜಮೀನನ್ನು ನನಗೆ ಮತ್ತು ನನ್ನ ಅಕ್ಕ ಮೀನಾಕ್ಷಿಗೆ ಬಿಟ್ಟಿದ್ದರು ಎಂದರೆ ಸರಿಯಲ್ಲ. ತಂದೆಗೆ ಇಬ್ಬರು ಮಕ್ಕಳು ಕುಮಾರ್ ಮತ್ತು ವಿಜಯ್ ಕುಮಾರ್ ರವರಿಗೆ ದಿಃ 21.06.2005 ರಂದು ನನ್ನ ಸಮ್ಮತಿ ಮೇರೆಗೆ ಹೊನ್ನೇನಹಳ್ಳಿ ಮತ್ತು ಮರೂರು ಗ್ರಾಮದ ಸರ್ವೆ ನಂ.ಗೆ ಸಂಬಂಧಿಸಿದಂತೆ ವಿಭಾಗ ಪತ್ರವನ್ನು ನನ್ನ ತಂದೆಯೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನೊಂದಾಯಿತ ವಿಭಾಗ ಪತ್ರದ ಪ್ರಕಾರ ಮರೂರು ಗ್ರಾಮದ ಸರ್ವೆ 180 ರಲ್ಲಿ 1 ಎಕರೆ 10 ಗುಂಟೆ, 170/9 (170/4 ) ರಲ್ಲಿ 25 ಗುಂಟೆ ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂ.60/1 ರಲ್ಲಿ 1 ಎಕರೆ, 7 ಗುಂಟೆ, ನನ್ನ ಅಣ್ಣ ವಿಜಯ ಕುಮಾರ್ ರವರ ಹಿಸ್ಸೆಗೆ ಬಂದಿದ್ದು, ಹಾಗೂ ನನ್ನ ತಮ್ಮ ಕುಮಾರ್ ನಿಗೆ ಮರೂರು ಗ್ರಾಮದ ಸರ್ವೆ ನಂ. ನಂ. 180 1 ಎಕರೆ 10 ಗುಂಟೆ, 170/2 1 ಎಕರೆ, 10 1/2 ಗುಂಟೆ, ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂ. 60/1 ರಲ್ಲಿ 3 ಗುಂಟೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಸ್ವತಃ ತಂದೆ ತೀರಿಕೊಂಡ ನಂತರ ನಮಗೆ ಗೊತ್ತಿಲ್ಲದ ಹಾಗೆ ಅವರೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ನಮ್ಮ ತಂದೆ 2017 ರಲ್ಲಿ ತೀರಿಕೊಂಡರು ಎಂದರೆ ಸರಿ. ನನ್ನ ಅಣ್ಣ ವಿಜಯ್ ಕುಮಾರ್ 2018 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ವಿಭಾಗ ಪತ್ರದ ಮೇಲೆ ವಿಜಯ್ ಕುಮಾರ್ ಹೆಸರಿಗೆ ಎಂ. ಆರ್ ನಂ.

1/2005-6 ರಂತೆ ಖಾತೆ ಆಗಿರುತ್ತದೆ ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಅದೇ ರೀತಿ ಕುಮಾರ್ ನಿಗೂ ಎಂ.ಆರ್ 1/2005 ರೀತ್ಯಾ ಖಾತೆ ಆಗಿರುತ್ತದೆ ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಖಾತಾ ಆದ ನಂತರ ವಿಜಯ್ ಕುಮಾರ್ ವಿಭಾಗದ ಸ್ವತ್ತುಗಳಲ್ಲಿ 2 ಮತ್ತು 3 ನೇ ಪ್ರತಿವಾದಿ ಕುಮಾರ್ ವಿಭಾಗದ ಸ್ವತ್ತುಗಳಲ್ಲಿ 9 ನೇ ಪ್ರತಿವಾದಿ ವ್ಯವಸಾಯ ಮಾಡಿಕೊಂಡು ಅವರವರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನನ್ನ ಅಣ್ಣ ವಿಜಯ್ ಕುಮಾರ್ 2018 ರಲ್ಲಿ ಮರಣ ಹೊಂದಿದ ಮೇಲೆ ಅವರ ಭಾಗದ ಸ್ವತ್ತಿಗೆ ಸಂಬಂಧಿಸಿದಂತೆ 2 ಮತ್ತು 3 ನೇ ಪ್ರತಿವಾದಿಯರ ಹೆಸರಿಗೆ ಎಂ.ಆರ್. ಹೆಚ್, 49/2018-19 ರಂತೆ ಖಾತೆ ಹೊಂದಿ ಅವರೆ ವ್ಯವಸಾಯ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಮೇಲೆ ಹೇಳಿದ ಎಲ್ಲಾ ವಿಚಾರಗಳು ನಮ್ಮ ಗಮನದಲ್ಲಿ ಇತ್ತು ಹೇಳಿಕೆ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ವಿಜಯ್ ಕುಮಾರ್ ಮದುವೆ ಪೂರ್ವದಲ್ಲಿ ಕುಡಿಯುತ್ತಿದ್ದ, ಮದುವೆ ಅದ ನಂತರ ಮಧ್ಯಸೇವನೆ ಮಾಡಿ ಹೆಂಡತಿ ಮತ್ತು ಮಗವಿಗೂ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದ ಆಗ ನಾನು ನನ್ನ ಯಜಮಾನರು ಅನೇಕ ಬಾರಿ ಹೋಗಿ ಬುದ್ದಿವಾದ ಹೇಳಿದ್ದೇವು ಎಂದರೆ ಸರಿಯಲ್ಲ. 2010, 2011, 2016 ಸಾಲಿನಲ್ಲಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲ ನನ್ನ ಅಣ್ಣನ ಮೇಲೆ ದೂರು ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಮತ್ತು ನನ್ನ ಯಜಮಾನರು ಬಂದು 2 ನೇ ಪ್ರತಿವಾದಿಗೆ ಮುಂದೆ ಎಲ್ಲಾ ಸರಿಹೋಗುತ್ತದೆ ಎಂದು ತಿಳುವಳಿಕೆ ನೀಡಿ ಕೇಸು ಮುಚ್ಚಿಹಾಕಿದ್ದೇವು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.